ಕಲೆಯತ್ತ ಹೊರಳಿತ್ತು. ಸಮೂಹ ಸಂವಹನದಲ್ಲಿ ಸ್ನಾತಕೋತ್ತರ ಪದವಿ ಪಡೆದ ಅವರಲ್ಲಿ ಸಿನಿಮಾ ಮಾಡುವ ಆಸೆಯೂ ಚಿಗುರಿತ್ತು. ಆದರೆ ಸಿನಿಮಾ, ದುಬಾರಿ ಕ್ಯಾಮೆರಾಗಳು, ಸಿಬ್ಬಂದಿ, ಹಣ... ಈ ವ್ಯಾಕರಣ ತನಗೆ ಸುಲಭಕ್ಕೆ ಒಗ್ಗುವಂಥದ್ದಲ್ಲ ಎಂದು ಕೈ ಚೆಲ್ಲಿದ್ದರೂ ತನ್ನೂರಿನ ಕಥೆ ಹೇಳಬೇಕೆಂಬ ಹಂಬಲ ಮಾತ್ರ ಒಂದಿಷ್ಟೂ ತಗ್ಗಿರಲಿಲ್ಲ.

## ಮಣ್ಣಿನ ಕಥೆಗಳನ್ನು ಕೆದಕಿ...

ತಮ್ಮ ಸುಂದರ ಊರೇ ತಮ್ಮ ಕಿರುಚಿತ್ರಗಳಿಗೆ ಫ್ರೇಮ್ ಆಗಬೇಕೆಂದು ಬಯಸಿದರು ನವೀನ್. ಸ್ನೇಹಿತನ ಬಳಿ ಕ್ಯಾಮೆರಾ, ರೆಕಾರ್ಡರ್ ತೆಗೆದುಕೊಂಡ ಅವರಿಗೆ ತಮ್ಮೂರಿನವರನ್ನೇ ಕಿರುಚಿತ್ರಗಳಲ್ಲಿ ಬಳಸಿಕೊಳ್ಳಬೇಕೆಂಬ ಆಸೆ. ನೆಲದ ಕಥೆಗಳನ್ನೇ, ತಾವು ಕಂಡ ಬದುಕಿನ ಪಾತ್ರಗಳನ್ನೇ ಕಿರುಚಿತ್ರಗಳಲ್ಲೂ ತರುವ ಹುಮ್ಮಸ್ಸು. 'ಕಲೆಯ ಕ್ಷೇತ್ರದಲ್ಲಿ ನಮ್ಮೂರಿನ ಕಡೆಯಿಂದ ಪ್ರಾತಿನಿಧ್ಯ ಇರಲಿಲ್ಲ. ಯಾಕೆ ಹೀಗೆಂದು ಯೋಚಿಸಿದಾಗ, ನಮ್ಮೂರಿಗೆ, ಇಲ್ಲಿನವರಿಗೆ ಆ ಎಕ್ಸ್‌ಪೋಷರ್ ಇಲ್ಲದಿರುವುದೇ ಕಾರಣ ಎನಿಸಿತು. ಹೇಗಾದರೂ ನಮ್ಮೂರನ್ನು ಪ್ರತಿನಿಧಿಸಬೇಕೆಂದುಕೊಂಡೆ. ನಾನು ಬರೆದಿರುವ ಕಥೆಗಳು ನಮ್ಮೂರಿನವೇ. ನಾನು ನೋಡಿರುವ ಜನರು, ನಾನು ಕಂಡಿರುವ ಬದುಕೂ ನನ್ನ ಕಿರುಚಿತ್ರಗಳಲ್ಲಿವೆ' ಎಂದು ಸಂತಸದಿಂದ ಹೇಳುತ್ತಾರೆ.

'ಇಮಾನ', ಬಿಡುಗಡೆ, 'ಹಬ್ಬ ಹರಿದಿನ ಸುಗ್ಗಿ ಶಿವರಾತ್ರಿ', 'ವಿದಾಯ'– ಹೀಗೆ ನಾಲ್ಕೈದು ಕಿರುಚಿತ್ರಗಳನ್ನು ರೂಪಿಸಿದ್ದಾರೆ ನವೀನ್. ಎಲ್ಲದರಲ್ಲೂ ತಮ್ಮ ಮಣ್ಣಿನ ಕಥೆಗಳ ಬಿಂಬಗಳನ್ನು ಮೂಡಿಸಿದ್ದಾರೆ. ಇವರ ಕಿರುಚಿತ್ರಗಳು ಭಾರತ, ರಷ್ಯಾ ಮತ್ತು ಅಮೆರಿಕದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡಿದ್ದಲ್ಲದೇ ಹಲವು ಪ್ರತಿಷ್ಠಿತ ಪ್ರಶಸ್ತಿಗಳನ್ನೂ ಪಡೆದುಕೊಂಡಿವೆ.

ಇಷ್ಟೆಲ್ಲ ಬೆಳವಣಿಗೆಗಳ ನಂತರ ತಮ್ಮೂರಿಗೊಂದು ಕಲಾಶಾಲೆ ನಿರ್ಮಿಸುವ ಉದ್ದೇಶವೂ ಹುಟ್ಟಿಕೊಂಡಿತ್ತು ನವೀನ್ ಅವರಲ್ಲಿ. ಹಲವು ವರ್ಷಗಳ ನಂತರ ಆ ಕನಸು ಸಾಕಾರಗೊಂಡಿದೆ.

''ನಾನು ಓದಲು ಆರಂಭಿಸಿದ ಮೇಲೆ ಕುವೆಂಪು ಹಾಗೂ ಅಂಬೇಡ್ಕರ್ ಅವರ ವಿಚಾರಧಾರೆಗಳು ಪ್ರಭಾವ ಬೀರಿದವು. ಸಾಮಾಜಿಕ ಬದಲಾವಣೆ ಒಬ್ಬರಿಂದ ಆಗುವಂಥದ್ದಲ್ಲ. ಎಲ್ಲ ಕ್ಷೇತ್ರದಲ್ಲೂ, ಜಾತಿ, ಧರ್ಮ, ಊರು ಇವೆಲ್ಲವನ್ನು ಮೀರಿ ಪ್ರಾತಿನಿಧ್ಯ ಸಿಗಬೇಕು. ಬಹಳಷ್ಟು ಸಮಸ್ಯೆಗಳಿಗೆ ಇದು ಮುಲಾಮು ಆಗಬಲ್ಲದು. ಆ ನಿಟ್ಟಿನಲ್ಲಿ ನಮ್ಮೂರಿನಲ್ಲೇ ಕಲಾಶಾಲೆಯೊಂದನ್ನು ತೆರೆಯುವ ಆಲೋಚನೆಯಿತ್ತು. ಈ ಬಾರಿ ಟೋಟೊ ಪ್ರಶಸ್ತಿ ಸ್ವೀಕರಿಸಿದಾಗ, ಆ ಪ್ರಶಸ್ತಿ ಹಣದಲ್ಲಿ ಕಲಾ ಶಾಲೆಯನ್ನು ತೆರೆಯುವುದಾಗಿ ಘೋಷಿಸಿದ್ದೆ. ಅದರಂತೆ ಶಾಲೆ ತೆರೆಯಲಾಗಿದೆ' ಎನ್ನುತ್ತಾರೆ ನವೀನ್.

## ಬದಲಾವಣೆಯ ಹೆಜ್ಜೆ 'ಭೀಮಶಾಲೆ'

ನವೀನ್ ಅವರು ತಮ್ಮ ಕನಸಿನ ಶಾಲೆಗೆ 'ಭೀಮಶಾಲೆ' ಎಂದು ಹೆಸರಿಟ್ಟಿದ್ದಾರೆ. ಇದೇ ಏಪ್ರಿಲ್‌ನಲ್ಲಿ ಹೊಸಬಾಳೆಯಲ್ಲಿ ಭೀಮಶಾಲೆ ಆರಂಭಗೊಂಡಿದೆ.

'ಅಂಬೇಡ್ಕರ್ ಅವರ ನೆನಪಿನಲ್ಲಿ 'ಭೀಮನ ಮಕ್ಕಳ ಶಾಲೆ' ಎಂದು ಹೆಸರಿಸಲಾಗಿತ್ತು. ನಂತರ 'ಭೀಮಶಾಲೆ' ಆಯಿತು. ಭೀಮ ಎನ್ನುವುದು ಬಲದ ಸಂಕೇತವೂ ಆದ್ದರಿಂದ ಈ ಹೆಸರಿಟ್ಟಿದ್ದೇವೆ. ಮಕ್ಕಳಿಗೆ ಒಂದು ವಾರ ತಮಟೆ ಕಲಿಕೆ ಮೂಲಕ ಶಾಲೆ ಆರಂಭಿಸಿದ್ದು, ಚಿತ್ರಕಲೆ, ಇಂಗ್ಲಿಷ್ ಕಲಿಕೆಯನ್ನು ಹೇಳಿಕೊಡಲಾಗುತ್ತಿದೆ. ಲೈಬ್ರರಿ ತೆರೆಯುವ ಕೆಲಸ ಕೂಡ ನಡೆಯುತ್ತಿದೆ. ವರ್ಷಪೂರ್ತಿ ಬೇರೆ ಬೇರೆ ಕಲಾ ಚಟುವಟಿಕೆಗಳನ್ನು ಮಾಡುವ ಉದ್ದೇಶವಿದೆ. ಕಲೆಯ ವಿಷಯದಲ್ಲಿ ಮೊದಲ ಹೆಜ್ಜೆ ಇಟ್ಟಿದ್ದೇವೆ. ಆನಂತರ ಬೇರೆ ಬೇರೆ ವಿಷಯಗಳಿಗೂ ವಿಸ್ತರಿಸಲಾಗುವುದು' ಎನ್ನುತ್ತಾರೆ ನವೀನ್.

'ಹಳ್ಳಿ ಮಕ್ಕಳು ಸ್ವಚ್ಛಂದವಾಗಿ ಕಲಿಕೆ ಮುಂದುವರೆಸಿದ್ದಾರೆ. ಹೊಸತನದ ಹಂಬಲ ಅವರಲ್ಲೂ ಹುಟ್ಟಿಕೊಂಡಿದೆ. ಮೊದಲು ಇಪ್ಪತ್ತಿದ್ದ ಮಕ್ಕಳ ಸಂಖ್ಯೆ ಈಗ ಅರವತ್ತಕ್ಕೆ ಮುಟ್ಟಿದೆ. ಬಾನು ಸಿದ್ಧವಾಗುತ್ತಿದೆ. ಹಾರುವ ಬಯಕೆ ಅವರ ಕಣ್ಣುಗಳಲ್ಲಿ ತುಂಬಿದೆ. ಅಗಾಧ ಬಾನಂಗಳಕ್ಕೆ ಜಿಗಿದು ಹೊಸ ಪ್ರಪಂಚ ಕಾಣುವ, ಸುತ್ತುವ ಅವರ ಆಸೆಗಳಿಗೆ ನಾವು ರೆಕ್ಕೆ ನೀಡಬೇಕಷ್ಟೆ' ಎಂದು ತಮ್ಮ ಮುಂದಿನ ನಡೆಯ ಬಗ್ಗೆ ನವೀನ್ ಹೇಳುವಾಗ ಅವರು ಹಲವು ಕಿರುದಾರಿಗಳು ಕೂಡಿಕೊಳ್ಳುವ ಕನಸುಗಳ ಹೆದ್ದಾರಿಯಲ್ಲಿ ನಿಂತಿರುವಂತೆ ಕಾಣಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in



ಭೀಮಶಾಲೆಯಲ್ಲಿ ಮಕ್ಕಳ ಮನಸ್ಸು ಅರಳಿಸುವ ಚಟುವಟಿಕೆಗಳು

